KACM510002762026

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯಃ</u>
<u>ನ.ರಾ.ಪುರ</u>

<u>ಸಿ.ಸಿ. ನಂಃ **170/2026**</u>

<u>ಫಿರ್ಯಾದುದಾರರು</u> : ಸರ್ಕಾರದ ಪರವಾಗಿ ನ.ರಾ. ಪುರ ಪೊಲೀಸರು

:ವಿ:

<u>ಆರೋಪಿ</u> : ಶ್ರೀ ಶಾನಾವಾಜ್, ಬಿನ್ ಹೈದರಾಲಿ,
26 ವರ್ಷಗಳು, ವೆಲ್ಡಿಂಗ್ ಕೆಲಸ,
ವಾಸಃ ಜಾಮೀಯಾ ಮಸೀದಿ ರಸ್ತೆ,
ಮುತ್ತಿನಕೊಪ್ಪ ಗ್ರಾಮ, ನ.ರಾ. ತಾಲ್ಲೂಕು.

------

<u>ಆರೋಪಣೆ</u>

ರಘುನಾಥ ಗೌಡ ಕೆ.ಟಿ., ಬಿ.ಕಾಂ. ಎಲ್.ಎಲ್.ಬಿ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ., ನ.ರಾ.ಪುರ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 09.05.2026 ರಂದು ಮದ್ಯಾಹ್ನ 12-00 ಗಂಟೆಯ ಸಮಯದಲ್ಲಿ ನ.ರಾ.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ನ.ರಾ.ಪುರ ನಗರದ ಸರ್ಕಾರಿ ಕಾಲೇಜ್ ಬಳಿ ರಸ್ತೆಯಲ್ಲಿ ಬಳಿ ಚಾಸಾ-1 ರವರು ಚಾಸಾ-2 ರವರೊಂದಿಗೆ ಇಲಾಖಾ ಜೀಪಿನಲ್ಲಿ ಗಸ್ತಿನಲ್ಲಿರುವಾಗ ಆರೋಪಿಯಾದ ನೀವು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಅವಿತುಕೊಳ್ಳುವ ರೀತಿ ವರ್ತಿಸುತ್ತಿದ್ದಾಗ ಆರೋಪಿಯಾದ ನಿಮ್ಮನ್ನು ಕರೆದು ವಿಚಾರ ಮಾಡಿದಾಗ ಆರೋಪಿಯಾದ ನೀವು ಮೇಲ್ನೋಟಕ್ಕೆ ಯಾವುದೋ ಅಮಲು ಪದಾರ್ಥ ಅಥವಾ ಗಾಂಜಾ ಸೇವನೆ ಮಾಡಿರುವ ಬಗ್ಗೆ ಅನುಮಾನ ಬಂದಾಗ ಠಾಣೆಗೆ ಕರೆದುಕೊಂಡು ಹೋಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ವರದಿಯಲ್ಲಿ Urine Test Positive for Marijuana Test result positive ಎಂದು ಬಂದಿದ್ದು, ಆ ಮೂಲಕ ನೀವು ಎನ್.ಡಿ.ಪಿ.ಎಸ್. ಕಾಯ್ದೆ ಕಲಂ 27(ಬಿ)ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಪ್ರಃ1: ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

ಉ : ತಿಳಿಯಿತು.

ಪ್ರಃ2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ : ತಪ್ಪು ಒಪ್ಪಿಕೊಳ್ಳುತ್ತೇನೆ.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 17 ನೇ ದಿವಸ ಜೂನ್ ಮಾಹೆ 2026.

17/6/26.

(ರಘುನಾಥ ಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ನ.ರಾ. ಪುರ.

ಆರೋಪಿಯ ಸಹಿಃ